

# ಅನುಷ್ಕಾ ಯಾಕೆ ಎಂದು ಕೇಳಿದ್ದ ಕರಣ್

ಕರಣ್ ಜೋಹರ್ ಬಾಲಿವುಡ್‌ನಲ್ಲಿ ಚಾಣಾಕ್ಷ ಮಾರುಕಟ್ಟೆ ತಂತ್ರಗಾರ ಎಂಬ ಮಾತಿದೆ. 'ಬಾಹುಬಲಿ' ಸಿನಿಮಾದ ಹಿಂದಿ ಅವತರಣಿಕೆಯನ್ನು ಅವರು ದೊಡ್ಡ ಲಾಭವನ್ನಾಗಿಸಿಕೊಂಡ ಕಥಾನಕವೇ ಇದಕ್ಕೆ ಸಾಕ್ಷಿ. ಈ ವರ್ಷ ಅವರ ಕ್ರಿಯಾಶೀಲತೆಯ ಇನ್ನೊಂದು ಮಗ್ಗುಲಿನ ರೂಪದಲ್ಲಿ 'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಸಿನಿಮಾ ತೆರೆಕಂಡಿತು. ಮಿಶ್ರ ಪ್ರತಿಕ್ರಿಯೆಗಳ ನಡುವೆಯೂ ಆ ಸಿನಿಮಾ ನಿಸೂರಾಗಿಸುವಂತಹ ವಹಿವಾಟನ್ನು ನಡೆಸಿರುವುದು ತಾಜಾ ಸುದ್ದಿ. ಅವರು ಸ್ವಜನಪಕ್ಷಪಾತಿ ಎಂದು ಅನೇಕರು ಮೊದಲಿನಿಂದ ಆರೋಪಿಸುತ್ತಲೇ ಬಂದಿದ್ದಾರೆ. ಆದರೆ, ಅವರು ಇತ್ತೀಚೆಗೆ ಸಂದರ್ಶನ ನೀಡುವಾಗ ಚಿತ್ರರಂಗದ ಹೊರಗಿನಿಂದ ಬಂದ ನಾಯಕಿಯೊಬ್ಬರ ವಿಷಯದಲ್ಲಿ ತಮ್ಮ ಧೋರಣೆ ಬದಲಾದ ಸತ್ಯವನ್ನು ಹಂಚಿಕೊಂಡರು.



2008ರಲ್ಲಿ 'ರಬ್ ನೆ ಬನಾದಿ ಜೋಡಿ' ಹಿಂದಿ ಸಿನಿಮಾಗೆ ಯಶ್‌ರಾಜ್ ಬ್ಯಾನರ್‌ನ ಆದಿತ್ಯ ಚೋಪ್ರಾ ಹೊಸಮುಖದ ಹುಡುಕಾಟದಲ್ಲಿದ್ದರು. ಅವರು ಹಾಗೂ ಕರಣ್ ಜೋಹರ್ ಸ್ನೇಹಿತರು. ಆದಿತ್ಯ ಮೇಜಿನ ಮೇಲಿದ್ದ ಒಂದು ಫೋಟೊವನ್ನು ಕರಣ್ ನೋಡಿದರು. ಅವರನ್ನು ಸಿನಿಮಾಗೆ ನಾಯಕಿಯಾಗಿ ಆಯ್ಕೆ ಮಾಡಬೇಕೆಂದು ಆದಿತ್ಯ ಅದಾಗಲೇ ನಿರ್ಧರಿಸಿದ್ದರು. ಆಗ ಕರಣ್ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. 'ಈ ನಟಿಯಲ್ಲಿ ಅದೇನು ಕಂಡು ಆಯ್ಕೆ ಮಾಡಿಕೊಂಡಿರುವರೊ' ಎಂದು ಪ್ರತಿಕ್ರಿಯಿಸಿದ್ದರು. ಆದರೆ, ಆದಿತ್ಯ ತಮ್ಮ ನಿರ್ಧಾರಕ್ಕೆ ಬದ್ಧರಾಗಿದ್ದರು. ಆ ಹೊಸಮುಖವೇ ಅನುಷ್ಕಾ ಶರ್ಮ.

'ರಬ್ ನೆ ಬನಾದಿ' ಜೋಡಿ ಸಿನಿಮಾ ಯಶಸ್ವಿಯಾಯಿತು. ಅನಂತರ ಅನುಷ್ಕಾ ವೃತ್ತಿಬದುಕಿನಲ್ಲಿ ಸಿನಿಮಾಗಳ ಸಂಕ್ರಮಣ. ಎರಡನೇ ಸಿನಿಮಾ 'ಬ್ಯಾಂಡ್ ಬಾಜಾ ಬಾರಾತ್' ನೋಡಿದ ಮೇಲೆ ಕರಣ್ ತಮ್ಮ ಅಭಿಪ್ರಾಯವನ್ನು ಬದಲಿಸಿಕೊಂಡರು. ಆದಿತ್ಯ ಹೊಸಮುಖದಲ್ಲಿ ಹುದುಗಿದ್ದ ನಟಿಯನ್ನು ಗುರುತಿಸಿದ್ದನ್ನು ಮೆಚ್ಚಿಕೊಂಡರು. ಮುಂದೆ ತಾವೇ ನಿರ್ದೇಶಿಸಿದ 'ಯೇ ದಿಲ್ ಹೈ ಮುಷ್ಕಿಲ್' ಚಲನಚಿತ್ರದಲ್ಲಿ ಅನುಷ್ಕಾ ಶರ್ಮ ಅವರಿಗೆ ಅವಕಾಶ ಕೊಟ್ಟರು. 'ಬಾಂಬೆ ವೆಲ್ವೆಟ್' ಸಿನಿಮಾದಲ್ಲಿ ಅದೇ ನಟಿಯ ಜೊತೆಗೆ ನಟಿಸಿದರು.

ಕರಣ್ ಜೋಹರ್ ಸಂದರ್ಶನದಲ್ಲಿ ಇವನ್ನೆಲ್ಲ ಮೆಲುಕು ಹಾಕಿದರು. ಕೆಲವೊಮ್ಮೆ ಫೋಟೊ ನೋಡಿ ನಟ–ನಟಿಯರನ್ನು ಆಯ್ಕೆ ಮಾಡುವ ವಿಧಾನ ಹೇಗೆ ಕೈಕೊಡುತ್ತದೆ ಎಂದು ಸೂಚ್ಯವಾಗಿ ತಿಳಿಸಿದರು.

ಮೊದಲ ಸಿನಿಮಾ ಆಯ್ಕೆಗೆಂದು ಅನುಷ್ಕಾ ಸ್ಕ್ರೀನ್‌ಟೆಸ್ಟ್‌ಗೆ ಬಂದಿದ್ದಾಗ ಅವರಲ್ಲಿ ದುಗುಡ ಇದ್ದುದನ್ನು ಕರಣ್ ತಾಯಿ ಗುರುತಿಸಿದ್ದರು. 'ಅವಳು ಗಡಗಡ ನಡುಗುತ್ತಿದ್ದಳು; ಪಾಪದ ಹುಡುಗಿ' ಎಂದು ಅವರು ಮನೆಗೆ ಬಂದಮೇಲೆ ತಮಗೆ ಹೇಳಿದ್ದನ್ನೂ ಕರಣ್ ನೆನಪಿಸಿಕೊಂಡರು. 'ಅನುಷ್ಕಾ ಸಾಮರ್ಥ್ಯದ ಅರಿವೇ ಇಲ್ಲದೆ ಆಕೆಯನ್ನು ಯಾಕೆ ಆಯ್ಕೆ ಮಾಡಿಕೊಂಡಿರುವೆ ಎಂದು ಆದಿತ್ಯ ಬಳಿ ನಾನು ಆಗ ಹೇಳಿದ್ದೆ' ಎಂದು ಅವರು ಪ್ರಾಮಾಣಿಕವಾಗಿ ನಡೆದ ಸಂಗತಿಯನ್ನು ವಿವರಗಳೊಂದಿಗೆ ಬಿಚ್ಚಿಟ್ಟರು. ■

# ಎರಡು ಭಾಗಗಳಲ್ಲಿ 'ದೇವರ'



ಜೂನಿಯರ್ ಎನ್‌ಟಿಆರ್ ಹಾಗೂ ಜಾಹ್ನವಿ ಕಪೂರ್ ಜೋಡಿಯಾಗಿ ಅಭಿನಯಿಸುತ್ತಿರುವ 'ದೇವರ' ತೆಲುಗು ಸಿನಿಮಾ ಎರಡು ಭಾಗಗಳಲ್ಲಿ ತೆರೆಕಾಣಲಿದೆ. ಮೊದಲ ಭಾಗವು ಮುಂದಿನ ವರ್ಷ ಏಪ್ರಿಲ್‌ನಲ್ಲಿ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಕೊರಟಾಲ ಶಿವ ಇತ್ತೀಚೆಗೆ ಸ್ಪಷ್ಟಪಡಿಸಿದರು.



'ಜನತಾ ಗ್ಯಾರೇಜ್' ತೆಲುಗು ಸಿನಿಮಾದಲ್ಲಿ ಜೂನಿಯರ್ ಎನ್‌ಟಿಆರ್ ಹಾಗೂ ಕೊರಟಾಲ ಶಿವ ಒಟ್ಟಾಗಿ ಕೆಲಸ ಮಾಡಿದ್ದರು. ಆ ಸಿನಿಮಾ ಸೂಪರ್‌ಹಿಟ್ ಆಗಿತ್ತು. ಕರಾವಳಿ ಭಾಗದಲ್ಲಿ ಜನರು ಆರಾಧಿಸುವ ವ್ಯಕ್ತಿಯ ಕಥಾನಕ 'ದೇವರ'. ಸಾಹಸ ಪ್ರಧಾನ ವಸ್ತುವಿನ ಈ ಚಿತ್ರದ ಮೂಲಕ ನಟಿ ಶ್ರೀದೇವಿ ಮಗಳು ಜಾಹ್ನವಿ ಕಪೂರ್ ದಕ್ಷಿಣ ಭಾರತ ಚಿತ್ರರಂಗಕ್ಕೆ ಕಾಲಿಟ್ಟಂತೆ ಆಗಿದೆ. ಸೈಫ್ ಅಲಿ ಖಾನ್ ಕೂಡ ಈ ಚಲನಚಿತ್ರದಲ್ಲಿ ಮುಖ್ಯ ಪಾತ್ರದಲ್ಲಿ ಅಭಿನಯಿಸಲಿದ್ದಾರೆ.

ಸಿನಿಮಾ ಶುರುಮಾಡಿದಾಗ ಎರಡು ಭಾಗಗಳಲ್ಲಿ ಚಿತ್ರೀಕರಣ ಮಾಡುವ ಉದ್ದೇಶವನ್ನು ಕೊರಟಾಲ ಶಿವ ವ್ಯಕ್ತಪಡಿಸಿರಲಿಲ್ಲ. ಚಿತ್ರಕಥಾ ವಿಸ್ತರಣೆಯ ನಂತರ ಆ ಆಲೋಚನೆ ಅವರಲ್ಲಿ ಮೊಳೆತಿದೆ. ಎರಡು ಭಾಗಗಳಲ್ಲಿ ಒಂದೇ ಸಿನಿಮಾ ಮಾಡುವುದು, ಆ ಮೂಲಕ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವುದು ಈಗ ಟ್ರೆಂಡ್ ಆಗಿಬಿಟ್ಟಿದೆ. ■